ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

20ನೇ ಮಹಡಿ, ವಿ.ವಿ. ದೊಡ್ಡಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01
ಕಛೇರಿ : 080-22864212 ಫ್ಯಾಕ್ಸ್ : 080-22863618
ವೆಬ್‌ಸೈಟ್ : www.gokdom.kar.nic.in
ಇ-ಮೇಲ್ : directorgokdom@gmail.com

ಸಂಖ್ಯೆ: ಅಸಂನಿ/ಆ/ವ.ಶಾ/ಸಿಆರ್-02/2017-18 ದಿನಾಂಕ: 28.06.2017

ಗೆ,
ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,

. . . . . . . . . . . . . . . . ಜಿಲ್ಲೆ

ಮಾನ್ಯರೇ,

**ವಿಷಯ:** 2017-18ನೇ ಸಾಲಿನಲ್ಲಿ ಮಂಜೂರಾಗಿರುವ ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಠಿಯಿಂದ ಮಹಿಳೆಯರಿಗಾಗಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 195 ಎಂಡಿಎಸ್ 2017, ದಿನಾಂಕ: 23.06.2017.

>>>()<<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಠಿಯಿಂದ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಅದರಂತೆ, ಹೊಸದಾಗಿ ಮಂಜೂರಾಗಿರುವ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು 2017-18 ನೇ ಸಾಲಿನ ಆರ್ಥಿಕ ವರ್ಷದಿಂದ ಪ್ರಾರಂಭಿಸಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರೊಂದಿಗೆ ಚರ್ಚಿಸಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸ್ಥಳೀಯ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಿ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಮಹಿಳೆಯರ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲು ಅವಶ್ಯವಿರುವ ಕಟ್ಟಡಗಳಿಗೆ ಈ ಕೆಳಗೆ ನಮೂದಿಸಿರುವ ಕಟ್ಟಡಗಳಲ್ಲಿ ಪ್ರಾರಂಭಿಸಲು ಸೂಚಿಸಿದೆ ಹಾಗೂ ಉಲ್ಲೇಖಿತ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಚಾಚು ತಪ್ಪದೇ ಅರ್ಹ ಉದ್ಯೋಗಸ್ಥ ಅಲ್ಪಸಂಖ್ಯಾತ ಮಹಿಳೆಯರನ್ನು ನಿಯಮಾನುಸಾರ ಪ್ರವೇಶ ನೀಡಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತೆ ಸೂಚಿಸಿದೆ.

**10 ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ವಿವರ.**

| ಕ್ರ. ಸಂ | ಜಿಲ್ಲೆ | ಸಂಖ್ಯಾಬಲ | ವಸತಿ ನಿಲಯಗಳ ಸಂ | ಕಟ್ಟಡದ ವಿವರ |
|---|---|---|---|---|
| 1 | ಬೆಂಗಳೂರು ನಗರ | 75 | 2 | |
| 2 | ಕಲಬುರಗಿ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಕೆ.ಎನ್.ಜೆಡ್ ಬಡಾವಣೆ |
| 3 | ಮೈಸೂರು | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಆವರಣ ಆರ್.ಎಸ್ ನಾಯ್ಡು ನಗರ, (ಹೆಚ್ಚುವರಿ ಕಟ್ಟಡ) |
| 4 | ಬೆಳಗಾಂ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಸುಭಾಷ್ ನಗರ, |
| 5 | ಧಾರವಾಡ /ಹುಬ್ಬಳ್ಳಿ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಪೋಲಿಸ್ ಕ್ವಾರ್ಟರ್ಸ್ |
| 6 | ದಕ್ಷಿಣ ಕನ್ನಡ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಬಿಲಂಬಿ (ಹೆಚ್ಚುವರಿ ಕಟ್ಟಡ) |
| 7 | ಶಿವಮೊಗ್ಗ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಲಷ್ಕರ್ ಮೊಹಲ್ಲಾ (ಹೆಚ್ಚುವರಿ ಕಟ್ಟಡ) |
| 8 | ದಾವಣಗೆರೆ | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಕುಂದವಾಡ ರಸ್ತೆ |
| 9 | ತುಮಕೂರು | 50 | 1 | ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಮೇಲುಕೋಟೆ (ಹೆಚ್ಚುವರಿ ಕಟ್ಟಡ) |
| | ಒಟ್ಟು | | 10 | |

- ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳ ನಿಲಯ ಪಾಲಕರು (ಮಹಿಳೆ) ಹುದ್ದೆಯ ಪ್ರಭಾರವನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿಲಯಪಾಲಕರಿಗೆ ಹೆಚ್ಚುವರಿ ಪ್ರಭಾರ ನೀಡತಕ್ಕದ್ದು.
- ಅಡುಗೆ, ಅಡುಗೆ ಸಹಾಯಕರು ಮತ್ತು ಕಾವಲುಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ಪಡೆಯತಕ್ಕದ್ದು.

ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳ ನಿರ್ವಹಣೆಯನ್ನು ಲೆಕ್ಕಶೀರ್ಷಿಕೆ 2225-03-277-2-64 (059) ನೂತನ ಹಾಸ್ಟೆಲ್‌ಗಳ ಪ್ರಾರಂಭ, ರಾಜ್ಯವಲಯಡಿ ಒದಗಿಸಲಾಗುವುದು.

ತಮ್ಮ ವಿಶ್ವಾಸಿ,

28/6

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.